**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್, ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆ.**

ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಗುತ್ತಿದ್ದು, ರೈತರು, ಕೂಲಿ ಕಾರ್ಮಿಕರು, ಸಾಮಾನ್ಯ ವರ್ಗದವರಿಗೆ ಇದರಿಂದ ತೊಂದರೆಯಾಗುತ್ತಿದ್ದು, ಇದರ ಬೆಲೆ ಇಳಿಕೆ ಮಾಡಲು ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯಲು ಬಯಸುತ್ತೇನೆ.

**ಸನ್ಮಾನ್ಯ ಮುಖ್ಯಮಂತ್ರಿಯವರ ಉತ್ತರ:**

ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆಯನ್ನು ಮಾರುಕಟ್ಟೆ ಆಧಾರಿತ ಮಾಡಿದಾಗಿನಿಂದ ಅವುಗಳ ಮಾರಾಟದ ಬೆಲೆಯಲ್ಲಿ ದಿನೇದಿನೇ ಬದಲಾವಣೆಗಳಾಗುತ್ತಿವೆ. ಮೂಲ ಬೆಲೆಯಲ್ಲಿ ಹೆಚ್ಚಳವಾದಾಗ ಅವುಗಳ ಮಾರಾಟದಿಂದ ಸಂಗ್ರಹವಾಗುವ ತೆರಿಗೆಯಲ್ಲಿಯೂ ಹೆಚ್ಚಳ ಉಂಟಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ದಿನಾಂಕ: 01-04-2015 ರಿಂದ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ವಿಧಿಸಲಾಗುವ ಕರ್ನಾಟಕ ರಾಜ್ಯ ಮಾರಾಟ ತೆರಿಗೆ (KST) ದರಗಳು ಈ ಕೆಳಗಿನಂತೆ ಇರುತ್ತವೆ:

| ದಿನಾಂಕದಿಂದ | ದಿನಾಂಕವರೆಗೆ | ಪೆಟ್ರೋಲ್ ತೆರಿಗೆ ದರ % | ಡೀಸೆಲ್ ತೆರಿಗೆ ದರ % |
|---|---|---|---|
| 01-04-2015 | 31-03-2016 | 26.00 | 16.65 |
| 01-04-2016 | 12-07-2018 | 30 | 19 |
| 13-07-2018 | 16-09-2018 | 32 | 21 |
| 17-09-2018 | 14-01-2019 | 28.75 | 17.73 |
| 05-01-2019 | 31-03-2020 | 32 | 21 |
| 01-04-2020 | ಇಲ್ಲಿಯವರೆಗೆ | 35 | 24 |

ಪು.ತಿ.ನೋ

ದಿನಾಂಕ 01-09-2021ರಂದು ಇರುವಂತೆ, ದಕ್ಷಿಣದ ರಾಜ್ಯಗಳಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಪೆಟ್ರೋಲ್ ಮತ್ತು ಡೀಸೆಲ್‌ಗಳ ಮಾರಾಟ ದರಗಳು ಈ ಕೆಳಗಿನಂತೆ ಇರುತ್ತವೆ:

| ವಿವಿಧ ಪ್ರದೇಶಗಳಲ್ಲಿ ಪ್ರತಿ ಲೀಟರ್‌ಗೆ ಪೆಟ್ರೋಲ್ ಮತ್ತು ಡೀಸೆಲ್ ದರಗಳು (ಬಿ.ಪಿ.ಸಿ.ಎಲ್.) | | |
|---|---|---|
| | ದಿನಾಂಕ 01-09-2021ರಲ್ಲಿ | ಪೆಟ್ರೋಲ್ ರೂ. ಗಳಲ್ಲಿ |
| ಕ್ರ. ಸಂ. | ರಾಜ್ಯದ ಹೆಸರು | ಪ್ರತಿ ಲೀಟರ್‌ನ ರೀಟೇಲ್ ಬೆಲೆ |
| 1 | ಬೆಂಗಳೂರು (ಕರ್ನಾಟಕ) | 104.91 |
| 2 | ಹೊಸೂರು (ತಮಿಳುನಾಡು) | 101.04 |
| 3 | ಕೇರಳ | 102.71 |
| 4 | ಆಂಧ್ರ ಪ್ರದೇಶ | 107.52 |
| 5 | ಮಹಾರಾಷ್ಟ್ರ | 107.62 |

| | ಡೀಸೆಲ್ | ರೂ.ಗಳಲ್ಲಿ |
|---|---|---|
| ಕ್ರ. ಸಂ. | ರಾಜ್ಯದ ಹೆಸರು | ಪ್ರತಿ ಲೀಟರ್‌ನ ರೀಟೇಲ್ ಬೆಲೆ |
| 1 | ಬೆಂಗಳೂರು (ಕರ್ನಾಟಕ) | 94.26 |
| 2 | ತಮಿಳುನಾಡು | 95.36 |
| 3 | ಕೇರಳ | 94.76 |
| 4 | ಆಂಧ್ರ ಪ್ರದೇಶ | 98.48 |
| 5 | ಮಹಾರಾಷ್ಟ್ರ | 95.13 |

ಮೇಲ್ಕಂಡ ರಾಜ್ಯಗಳ ಪೆಟ್ರೋಲ್ ಮತ್ತು ಡೀಸೆಲ್‌ನ ಮಾರಾಟ ದರಗಳನ್ನು ಅವಲೋಕಿಸಿದಾಗ ಕೇರಳ ಹಾಗೂ ತಮಿಳುನಾಡು ರಾಜ್ಯಗಳನ್ನು ಹೊರತುಪಡಿಸಿದರೆ ದಕ್ಷಿಣದ ರಾಜ್ಯಗಳಲ್ಲಿ ಪೆಟ್ರೋಲ್ ದರವು ಕರ್ನಾಟಕದಲ್ಲಿಯೇ ಕಡಿಮೆ ಇರುತ್ತದೆ. ಡೀಸೆಲ್ ಮಾರಾಟ ದರವು ದಕ್ಷಿಣದ ರಾಜ್ಯಗಳಲ್ಲಿ ಕರ್ನಾಟಕದಲ್ಲಿಯೇ ಅತೀ ಕಡಿಮೆ ಇರುತ್ತದೆ.

ಅಡುಗೆ ಅನಿಲದ ಬೆಲೆಯನ್ನು ಕೇಂದ್ರ ಸರ್ಕಾರವು ನಿಗದಿ ಮಾಡುವುದರಿಂದ, ಅಡುಗೆ ಅನಿಲದ ಬೆಲೆ ನಿಗದಿಯು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿ ಇರುವುದಿಲ್ಲ.

ಸಂಖ್ಯೆ: ಆಇ 79 ಸಿಎಸ್ಎಲ್ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ